# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 571 |
| ಸದಸ್ಯರ ಹೆಸರು | : | ಡಾ|| ತೇಜಸ್ವಿನಿ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 17.12.2021 |
| ಉತ್ತರಿಸುವ ಸಚಿವರು | : | ಮಾನ್ಯ ಕಂದಾಯ ಸಚಿವರು |

| ಪ್ರಶ್ನೆ | ಉತ್ತರ |
|---|---|
| **(ಅ)** ಇತ್ತೀಚೆಗೆ ರಾಜ್ಯದಲ್ಲಿ ಸುರಿದ ಭಾರಿ ಮಳೆಯಿಂದ ರೈತರಿಗಾದ ಬೆಳೆ ನಷ್ಟವೆಷ್ಟು; ಅತೀವೃಷ್ಟಿಯಿಂದ ಭಾದಿತರಾದ ರೈತರ ಸಂಖ್ಯೆ ಎಷ್ಟು; ಯಾವ ರೀತಿ ಪರಿಹಾರ ಯೋಜನೆ ಒದಗಿದಲಾಗಿದೆ; ಯಾವ ರೀತಿಯ ಬೆಳೆಗಳು ನಾಶವಾಗಿವೆ; ನಷ್ಟದ ಅಂದಾಜು ಮಾಡಲು ಯಾವ ವೈಜ್ಞಾನಿಕ ಕ್ರಮ ಅನುಸರಿಸಲಾಗಿದೆ; | ಅತಿವೃಷ್ಟಿಯಿಂದ ಬೆಳೆಹಾನಿಯಾದ ಪ್ರದೇಶಗಳಲ್ಲಿ, ಕೃಷಿ, ತೋಟಗಾರಿಕೆ ಹಾಗೂ ಕಂದಾಯ ಇಲಾಖೆಯಿಂದ ಜಂಟಿ ಸರ್ವೆ ನಡೆಸಿ ಬೆಳೆ ಹಾನಿಯ ಪ್ರಮಾಣ ಹಾಗೂ ವಿಸ್ತೀರ್ಣವನ್ನು ನಿರ್ಧರಿಸಲಾಗುತ್ತದೆ. ಸದರಿ ತಂಡದ ವರದಿಯನುಸಾರ ಜುಲೈ ರಿಂದ ನವೆಂಬರ್ ವರೆಗೆ, ಒಟ್ಟು 12.54 ಲಕ್ಷ ಹೆಕ್ಟೇರ್ ಬೆಳೆಹಾನಿಯಾಗಿದೆ.<br>ಬೆಳೆ ಹಾನಿಯಾದ ಸಂತ್ರಸ್ಥರಿಗೆ ಕೇಂದ್ರ ಸರ್ಕಾರ SDRF/NDRF ಮಾರ್ಗಸೂಚಿಯನ್ವಯ ಇನ್‌ಪುಟ್ ಸಬ್ಸಿಡಿಯನ್ನು ಪಾವತಿಸಲಾಗುತ್ತದೆ. |
| **(ಆ)** ಕೇಂದ್ರದಿಂದ ಪ್ರವಾಹ ಪೀಡಿತ ಕೃಷಿ ವಲಯಕ್ಕೆ ಬಂದಿರುವ ಪರಿಹಾರವೆಷ್ಟು; ಎಷ್ಟು ನಿರೀಕ್ಷೆ ಇದೆ; ಯಾವಾಗ ಬರಲಿದೆ; ಎಷ್ಟು ಹಂತಗಳಲ್ಲಿ ಬರಲಿದೆ; ಅಗತ್ಯ ಮಾಹಿತಿ ಅಂಕಿ ಅಂಶ ನೀಡಲಾಗಿದೆಯೇ; | ಜುಲೈ ರಿಂದ ನವೆಂಬರ್ ವರೆಗೆ, ಒಟ್ಟು 12.54 ಲಕ್ಷ ಹೆಕ್ಟೇರ್ ಬೆಳೆಹಾನಿಯಾಗಿದ್ದು, ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಇನ್‌ಪುಟ್ ಸಬ್ಸಿಡಿ ಪಾವತಿಗಾಗಿ ರೂ.1111.84 ಕೋಟಿ ಆರ್ಥಿಕ ನೆರವನ್ನು ಕೋರಿದ್ದು, ಕೇಂದ್ರದಿಂದ ಅನುದಾನ ನಿರೀಕ್ಷಿಸಲಾಗಿದೆ. |
| **(ಇ)** ರೈತರ ರಾಸುಗಳಿಗೆ ದನಕರು ಕುರಿ ಕೋಳಿ ಹೀಗೆ ಕೃಷಿಕರ ಭಾಗವಾಗಿರುವ ರೈತ ಅವಲಂಬಿತ ಪ್ರಾಣಿಗಳಿಗೆ ಅತಿವೃಷ್ಟಿ ಕಾಲದಲ್ಲಿ ಯಾವ ರೀತಿಯ ಆಹಾರ (ಮೇವು) ವಿತರಿಸಲಾಯಿತು; | ಅತಿವೃಷ್ಟಿ/ಪ್ರವಾಹ ಉಂಟಾಗಿರವ ಪ್ರದೇಶಗಳಲ್ಲಿ ಜಾನುವಾರು ಸಂರಕ್ಷಣೆಗಾಗಿ ಅಗತ್ಯಕತೆಯನುಸಾರ ಕಾಳಜಿ ಕೇಂದ್ರದ ಸಮೀಪದಲ್ಲಿ ಗೋಶಾಲೆ ತೆರೆಯಲು ಜಿಲ್ಲಾಡಳಿತಕ್ಕೆ ಸೂಚಿಸಲಾಗಿದೆ. ಜುಲೈ ಮಾಹೆಯ ಪ್ರವಾಹ ಸಂದರ್ಭದಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ 40 ಗೋಶಾಲೆಗಳನ್ನು ತೆರೆದು 43,913 ಜಾನುವಾರುಗಳನ್ನು ಸಂರಕ್ಷಿಸಲಾಗಿತ್ತು. |
| **(ಈ)** ಬಹು ಬೆಳೆ ತೆಗೆಯುತ್ತಿದ್ದ ರೈತರಿಗೆ ಅತಿ ಮಳೆ / ಅಕಾಲಿಕ ಮಳೆಯಿಂದ ಯಾವ ರೀತಿ ತೊಂದರೆಯಾಗಿದೆ; ಯಾವ ರೀತಿಯ ಪರಿಹಾರ ನೀಡಲು ಇಲಾಖೆ ಯೋಜಿಸಿದೆ? (ವಿವರ ನೀಡುವುದು) | ಬಹು ಬೆಳೆ ತೆಗೆಯುತ್ತಿದ್ದ ರೈತರಿಗೆ ಅತಿ ಮಳೆ / ಅಕಾಲಿಕ ಮಳೆಯಿಂದಾಗಿ ಆರ್ಥಿಕವಾಗಿ ನಷ್ಟವಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದ SDRF/NDRF ಮಾರ್ಗಸೂಚಿಯನ್ವಯ ಪ್ರತಿ ಹೆಕ್ಟೇರ್‌ಗೆ ರೂ.18,000/- ಇನ್‌ಪುಟ್ ಸಬ್ಸಿಡಿಯನ್ನು ಗರಿಷ್ಟ 2 ಹೆಕ್ಟೇರ್‌ಗೆ ಸೀಮಿತಗೊಳಿಸಿ ಇನ್‌ಪುಟ್ ಸಬ್ಸಿಡಿಯನ್ನು ವಿತರಿಸಲಾಗುತ್ತದೆ ಹಾಗೂ ರೈತರು ತಾವು ಬೆಳೆದಿರುವ ಬೆಳೆಗಳಿಗೆ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯಡಿ ನೋಂದಾಯಿಸಿದಲ್ಲಿ ಅಕಾಲಿಕ ಮಳೆಯಿಂದಾದ ಬೆಳೆ ನಷ್ಟಕ್ಕೆ ಮಧ್ಯಂತರ ಪರಿಹಾರವನ್ನು ಕೃಷಿ ಇಲಾಖೆಯಿಂದ ನೀಡಲಾಗುತ್ತದೆ. |

ಕಂಇ 601 ಟಿಎನ್‌ಆರ್ 2021

(ಆರ್. ಅಶೋಕ)
ಕಂದಾಯ ಸಚಿವರು